# ಬೀದಿ ವ್ಯಾಪಾರ:
# ಪಕ್ಕ ಲೀಗಲ್!



# ಬೀದಿ ವ್ಯಾಪಾರ:
# ಪಕ್ಕ ಲೀಗಲ್!

ದಿಲ್ಲಿ, ಮುಂಬೈ, ಬೆಂಗಳೂರು, ಭಾರತದ ಯಾವುದೇ ನಗರದ ಬೀದಿಗಳನ್ನು ಗಮನಿಸಿದರೆ, ಬೀದಿ ವ್ಯಾಪಾರ ಒಂದು ಪ್ರಮುಖ ಪಾತ್ರ ವಹಿಸುತ್ತದೆ. ಬೀದಿ ವ್ಯಾಪಾರಿಗಳಿಂದ ನಗರದ ಜನ ಸಾಮಾನ್ಯರಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ವಸ್ತುಗಳು ದೊರಕುತ್ತವೆ, ನಗರದ ಜೀವನ ಸ್ವಲ್ಪ ಮಟ್ಟಿಗೆ ಕೈಗೆಟಕುವಂತಾಗುತ್ತದೆ. ಬೀದಿ ವ್ಯಾಪಾರಿಗಳು ಒಂದು ರಸ್ತೆಯ ಕಿವಿಗಳು ಹಾಗು ಕಣ್ಣುಗಳಿದ್ದಂತೆ. ಅವರಿಂದ ನಮ್ಮ ರಸ್ತೆಗಳು ಸುರಕ್ಷಿತವಾಗುತ್ತವೆ, ನಮ್ಮ ರಸ್ತೆಗಳಿಗೆ ಒಂದು ವೈಶಿಷ್ಟತೆ ಬರುತ್ತದೆ. ಜಗತ್ತಾದ್ಯಂತ, ಬೀದಿ ವ್ಯಾಪಾರ ನಗರಗಳ ಆರ್ಥಿಕತೆ ಹಾಗು ಸಂಸ್ಕೃತಿಕ ಪರಂಪರೆಯ ಮುಖ್ಯ ಭಾಗವಾಗಿದೆ. ಭಾರತದಲ್ಲಿ, ಬೀದಿ ವ್ಯಾಪಾರ ಕೋಟ್ಯಾಂತರ ಜನರಿಗೆ ಜೀವನೋಪಾಯ ನೀಡುತ್ತದೆ. ಅದರಲ್ಲೂ ಹಳ್ಳಿಯಿಂದ ನಗರಕ್ಕೆ ವಲಸೆ ಬಂದವರಿಗೆ, ಓದು ಬರಹ ಬರದೇ ಇರದವರಿಗೆ, ಬೇರೆ ಎಲ್ಲೂ ಕೆಲಸ ಸಿಗದೆ ಇರುವವರಿಗೆ ಬೀದಿ ವ್ಯಾಪಾರ ಒಂದು ದಾರಿ ತೋರಿಸುತ್ತದೆ. ಬೀದಿ ವ್ಯಾಪಾರದಿಂದ ವ್ಯವಸಾಯ, ಸಣ್ಣ ಕೈಗಾರಿಕೆಗಳಲ್ಲಿ ಕೆಲಸಗಳು ಸೃಷ್ಟಿ ಆಗುತ್ತವೆ.


ಇಂದು ನಮ್ಮ ರಸ್ತೆಗಳು ಯಾರಿಗೆ ಸೇರಿದೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ನಮ್ಮ ರಸ್ತೆಗಳನ್ನು ಯಾರು ಬಳಿಸಬಹುದು, ಏತಕ್ಕಾಗಿ ಬಳಿಸಬಹುದು, ಹೇಗೆ ಬಳಿಸಬಹುದು ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಈ ಒಂದು ಸಂದರ್ಭದಲ್ಲಿ ಬೀದಿ ವ್ಯಾಪಾರಿಗಳ ಮೇಲೆ ತೀವ್ರವಾದ ಶೋಷಣೆಯಾಗುತ್ತಿದೆ. ಬೀದಿ ವ್ಯಾಪಾರಿಗಳು ಎದುರಿಸುತ್ತಿರುವ ಕಿರುಕುಳವನ್ನು, ಶೋಷಣೆಯನ್ನು ಗಮನಿಸಿ, ಸರ್ವೋಚ್ಚ ನ್ಯಾಯಾಲಯವು ಬೀದಿ ವ್ಯಾಪಾರಿಗಳ ಹಕ್ಕಿನ ರಕ್ಷಣೆಗಾಗಿ ರಾಷ್ಟ್ರ ಮಟ್ಟದ ಕಾನೂನೊಂದನ್ನು ಜಾರಿಗೊಳಿಸಲು ಒತ್ತಾಯಿಸಿತು. ಇದರ ಪರಿಣಾಮವಾಗಿ, ಕೇಂದ್ರ ಸರ್ಕಾರವು ೨೦೧೪ರಲ್ಲಿ ಬೀದಿ ವ್ಯಾಪಾರಿಗಳ ಜೀವನೋಪಾಯ ರಕ್ಷಣೆ ಹಾಗು ನಿಯಂತ್ರಣ ಕಾಯ್ದೆಯನ್ನು ಅನುಷ್ಠಾನಗೊಳಿಸಿತು.

ನಮ್ಮ ದೇಶದ ಇತರೆ ಕಾನೂನುಗಳಂತೆ, ಈ ಕಾನೂನು ಸಹ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿಲ್ಲ. ಯಾರ ಹಕ್ಕುಗಳನ್ನು ರಕ್ಷಿಸಲು ಹೊರಟಿದ್ದಿಯೋ, ಆ ಬೀದಿ ವ್ಯಾಪಾರಿಗಳಿಗೆ ಸಹ ಈ ಕಾನೂನು ಅರ್ಥವಾಗುವುದು ಕಷ್ಟವಿದೆ. ಕಾನೂನು ಅರ್ಥವಾದರೆ, ಬೀದಿ ವ್ಯಾಪಾರಿಗಳು ಕಾನೂನನ್ನು ಅವರ ಹಿತರಕ್ಷಣೆಗಾಗಿ ಉಪಯೋಗಿಸಬಹುದು. ಈ ವರ್ಣ ಪುಸ್ತಕ, ಬೀದಿ ವ್ಯಾಪಾರಿಗಳಿಗೆ, ಕಾನೂನಿನ ಕೆಲವು ಮುಖ್ಯ ಅಂಶಗಳನ್ನು ಅರ್ಥಮಾಡಿಸುವುದಕ್ಕೆ ಒಂದು ಮೊದಲ ಹೆಜ್ಜೆ. ಈ ಪುಸ್ತಕವು, ಬೀದಿ ವ್ಯಾಪಾರಿಗಳಿಗೂ ಹಾಗು ಬೀದಿ ವ್ಯಾಪಾರಿಗಳನ್ನು ಬೆಂಬಲಿಸುವ ಸಂಘಟನೆಗಳಿಗೂ ಒಂದು ಸಂಪನ್ಮೂಲವಾಗಿರಲು ಬಯಸುತ್ತದೆ.

**ಕಥೆ – ಶೃತಿ ಕೃಷ್ಣನ್, ಲೇಖಾ ಅಡವಿ, ವಿನಯ್ ಕೂರಗಾಯಲ ಶ್ರೀನಿವಾಸ**
**ವಿನ್ಯಾಸ – ವಿನಾಯಕ್ ವರ್ಮ**

**ಸಂಪರ್ಕ–**
**ಬೆಂಗಳೂರು ಜಿಲ್ಲ ಬೀದಿ ವ್ಯಾಪಾರ ಸಂಘಟನೆಗಳ ಒಕ್ಕೂಟ –**
**9880595032, 9880316961, 9686757053**


**ಪ್ರಕಟಣೆ : ಪರ್ಯಾಯ ಕಾನೂನು ವೇದಿಕೆ, ಬೆಂಗಳೂರು ಜಿಲ್ಲ ಬೀದಿ ವ್ಯಾಪಾರ ಸಂಘಟನೆಗಳ ಒಕ್ಕೂಟದ ಐಕಮತ್ಯದಲ್ಲಿ**


ಕುಮಾರ್ ಹಾಗು ಕಮಲಾ ರೈತರು.
ಹಳ್ಳಿಯಲ್ಲಿ ಮಳೆಯಾಗದ ಕಾರಣ,
ಮಗಳು ಶಾಂತಿಯನ್ನು ಹಳ್ಳಿಯಲ್ಲೇ
ಬಿಟ್ಟು ನಗರಕ್ಕೆ ವಲಸೆ ಬಂದರು.

ನಗರಕ್ಕೆ ಬಂದ ನಂತರ ಅವರ ಬದುಕಿಗಾಗಿ ಬೀದಿ ವ್ಯಾಪಾರ ಆರಂಭಿಸಿದರು. ಅಲ್ಲಿ ಶಾಂತಾ ಮೇರಿ ಮತ್ತು ಮುನಿರಾಜು ಎಂಬ ಬೀದಿ ವ್ಯಾಪಾರಿಗಳ ಪರಿಚಯವಾಯಿತು.

"ನಾನು ಬೆಂಗಳೂರಿನಲ್ಲೇ ಹುಟ್ಟಿ ಬೆಳೆದಿದ್ದು. ನನ್ನ ಮನೆ ಇರುವುದು ಇಲ್ಲೇ ಪಕ್ಕದ ಸ್ಲಂನಲ್ಲಿ. ಸುಮಾರು ವರ್ಷಗಳಿಂದ ಹಣ್ಣು ಮಾರುತ್ತಿದ್ದೀನಿ. ಕಲಿಯದೇ ಇರುವವರೆಗೆ ಈ ನಗರದಲ್ಲಿ ಬೇರೆ ಕೆಲಸ ಸಿಗುವುದಿಲ್ಲ," ಎಂದರು ಮುನಿರಾಜು.





"ನಾನು ಅದೇ ಸ್ಲಂನಲ್ಲೇ ಇರೋದು. ನನಗೆ ಇಬ್ಬರು ಮಕ್ಕಳು. ಗಂಡನಿಗೆ ಕೆಲಸ ಇಲ್ಲ," ಎಂದಳು ಶಾಂತಾ ಮೇರಿ.

ದಿನಾ ಬೆಳಿಗ್ಗೆ ೩ ಗಂಟೆಗೆ ಎದ್ದು, ಕುಮಾರ್ ಮತ್ತು ಕಮಲಾ ಮಾರುಕಟ್ಟೆಯಿಂದ ತಾಜಾ ತರಕಾರಿಯನ್ನು ಕೊಂಡು, ಭಾರವಾದ ಚೀಲಗಳನ್ನು ಬಸ್ಸಿನಲ್ಲಿ ಒಯ್ಯುತ್ತಾರೆ. ಮಳೆಯಿರಲಿ, ಸುಡು ಬಿಸಿಲಿರಲಿ ಇವರಿಬ್ಬರೂ ಸೇರಿ ವ್ಯಾಪಾರ ಮಾಡುತ್ತಾರೆ.



ದಿನಗಳು ಕಳೆದಂತೆ, ಇವರಿಗೆ ಗ್ರಾಹಕರು
ಹೆಚ್ಚಾದರು. ಅಂಗಡಿ ವ್ಯಾಪಾರಸ್ಥ ಶಕೀಲ್
ಇವರ ಬಳಿ ದಿನಾ ತರಕಾರಿ ಕೊಳ್ಳುತ್ತಿದ್ದ.
ಅನಿತಾ ಎಂಬ ಹುಡುಗಿಯ ಅಜ್ಜಿ
ಪರಿಚಯದವರಾದರು. ಅನಿತಾಳ ಶಾಲೆ
ಬಸ್ ಅವಳನ್ನು ಕಮಲಾ ಅವರ ಗಾಡಿಯ
ಮುಂದೆ ಬಿಟ್ಟು ಹೋಗುತ್ತಿತ್ತು. ಅಜ್ಜಿ
ಬರುವ ತನಕ ಅನಿತಾ ಕಮಲಾ
ಜೊತೆಯಾಗಿರುತ್ತಿದ್ದರು.
ಪೋಲೀಸಪ್ಪ ಶಿವಾ ಸಹ
ಪರಿಚಯವಾದನು. ಇವರೆಲ್ಲರ
ಪರಿಚಯವಿದ್ದರೂ ಕುಮಾರ್
ಮತ್ತು ಕಮಲಾರವರಿಗೆ
ಹಳ್ಳಿಯ ಹಾಗು ತೋಟದ
ನೆನಪು ಕಾಡುತ್ತಿತ್ತು.



ಆರು ತಿಂಗಳಲ್ಲಿ ಕುಮಾರ ವ್ಯಾಪಾರದ
ಜೊತೆ ಮಾಲಿಯ ಕೆಲಸ ಮಾಡಲು
ಕೂಡಾ ಆರಂಭಿಸಿದ.





ಕಮಲಾ ಸಹ ಟೀ ಮಾರಾಟ
ಮಾಡಲು ಶುರು ಮಾಡಿದಳು.





ನಗರವನ್ನೇ ಮನೆಯೆಂದು
ಒಪ್ಪಿಕೊಂಡು ಆಗಲೇ ಒಂದು
ವರ್ಷವಾಯಿತು. ಮನೆಯೊಂದನ್ನು
ಬಾಡಿಗೆಗೆ ಪಡೆದು, ಶಾಂತಿಯನ್ನು
ನಗರಕ್ಕೆ ತರಲು ಸಹಾ ಈಗಾಗಲೇ
ಸಾಕಷ್ಟು ಹಣವನ್ನು ಕೂಡಿಟ್ಟಿದರು.

ಕೊನೆಗೂ ಮೂರು ಜನ
ಒಟ್ಟಿಗಿರಬಹುದೆಂದು ಸಂತೋಷ ಪಟ್ಟರು.


ಒಂದು ಮಧ್ಯಾನ ಗುಂಡಾಗಳ ಗುಂಪೊಂದು ಅವರ ಗಾಡಿಗಳ ಬಳಿ ಬಂದರು. “ಒಂದು ವಾರದೊಳಗೆ ಜಾಗಾ ಖಾಲಿ ಮಾಡಿ. ಇಲ್ಲಿ ಮಾಲ್ ಒಂದನ್ನು ಕಟ್ಟ ಬೇಕು,” ಎಂದು ಬೆದರಿಸಿದರು.
“ಆದರೆ, ನಾವು ಎಲ್ಲಿಗೆ ಹೋಗುವುದು?” ಎಂದು ವ್ಯಾಪಾರಿಗಳು ಪ್ರಶ್ನಿಸಿದರು.
ಗುಂಡಾಗಳು ಬೆದರಿಸುತ್ತಾ, “ನೀವು ಮಾಡುತ್ತಿರುವುದು ಕಾನೂನು ಬಾಹಿರ. ಬೀದಿಯಲ್ಲಿ ವ್ಯಾಪಾರ ಮಾಡುವ ಹಾಗಿಲ್ಲ! ಒಂದು ವಾರ ಟೈಮ್ ಇದೆ ಅಷ್ಟೆ! ನೆನಪಿರಲಿ! ಬೇಗ ಜಾಗಿ ಖಾಲಿ ಮಾಡಿ”


ಮರುದಿನ ಪೋಲೀಸಪ್ಪ ಶಿವಾ ಅವರ ಗಾಡಿಯ ಬಳಿ ಬಂದ. ಕುಮಾರ್ ಮತ್ತು ಕಮಲಾರ ಬೇಸತ್ತ ಮುಖವನ್ನು ನೋಡಿ "ಏನಾಯ್ತು? ಯಾಕೆ ಹೀಗಿದ್ದೀರ?" ಎಂದು ಕೇಳಿದನು. "ನಮ್ಮನ್ನು ಇಲ್ಲಿಂದ ಎತ್ತಿಸುತ್ತಿದ್ದಾರೆ," ಎಂದನು ಕುಮಾರ್. "ಆದರೆ ನಿಮಗಾಗಿ ಹೊಸ ಕಾನೂನು ಇದೆಯಲ್ಲಾ! ಅದರಂತೆ ನಿಮ್ಮನ್ನು ಇಲ್ಲಿಂದ ಕದಲಿಸಲಾಗುವುದಿಲ್ಲ," ಎಂದನು ಪೋಲೀಸಪ್ಪ ಶಿವಾ.
"ಹಾಗೆ ನೋಡಿದ್ರೇ ಬೆಂಗಳೂರು ಪೋಲೀಸ್ ಇಲಾಖೆ ಕೂಡಾ ಜೂನ್ ೨೦೧೫ರಲ್ಲಿ ಆದೇಶವನ್ನು ಹೊರಡಿಸಿದ್ದಾರೆ. ಬಿ.ಬಿ.ಎಂ.ಪಿಯು ನಿಮ್ಮೆಲ್ಲರ ಸಮೀಕ್ಷೆ ನಡೆಸಿ ಗುರುತಿನ ಚೀಟಿಗಳನ್ನು ನೀಡುವ ತನಕ ಯಾವುದೇ ಬೀದಿ ವ್ಯಾಪಾರಿಯನ್ನು ಅವರ ಜಾಗಗಳಿಂದ ಕದಲಿಸಲಾಗುವುದಿಲ್ಲ. ಹಾಗೆ ಮಾಡಿದರೆ, ಅದು ಕಾನೂನು ವಿರುದ್ಧ."
"ಇದು ಯಾವ ಕಾನೂನು?" ಕಮಲಾ ಕೇಳಿದಳು.
"ಗೊತ್ತಿಲ್ವೇ? ಇದು ಬೀದಿ ವ್ಯಾಪಾರಿಗಳ ಜೀವನೋಪಾಯದ ರಕ್ಷಣೆ ಹಾಗು ನಿಯಂತ್ರಣ ಕಾಯ್ದೆ, ೨೦೧೪. ನನಗೆ ವಿವರಿಸಲು ಸಮಯ ಇಲ್ಲ. ಮುಂದಿನ ಸಾರಿ ಹೇಳ್ತೀನಿ."


“ಈ ಕಾನೂನಿನ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು,” ಎಂದಳು ಕಮಲಾ.
“ಯಾವುದರ ಬಗ್ಗೆ?” ಎಂದು ಕೇಳಿದನು ಮುನಿರಾಜು.
“ಕೇಳಿಸಿಕೊಳ್ಳಲಿಲ್ವಾ? ಪೋಲೀಸಪ್ಪ ಹೇಳಿದರಲ್ಲಾ. ಯಾವುದೋ ಹೊಸ ಕಾನೂನು.”
“ಹೌದಾ...”
“ಏನಾಯ್ತು?” ಅನಿತಾಳ ಅಜ್ಜಿ ಆಗಷ್ಟೇ ಬರುತ್ತಾ ಕೇಳಿದರು.
“ಅಜ್ಜಿ, ಗುಂಡಾಗಳು ಬಂದು ನಮ್ಮನ್ನು ಬೆದರಿಸಿ ಹೋದರು. ಜಾಗ ಖಾಲಿ ಮಾಡಬೇಕಂತೆ!”
“ಎಲ್ಲಿ ಹೋಗ್ತೀರ?! ನೀವಿಲ್ಲಿಂದ ಹೋದರೆ ನಾನೇನು ಮಾಡಲಿ? ಅನಿತಾ ಶಾಲೆಯಿಂದ ಬಂದ ಮೇಲೆ ಎಲ್ಲಿ ಕಾಯೋದು? ನನ್ನ ಮಗಳು ಬಂದಾಗ, ಹೆಚ್ಚು ಸಮಯ ನನ್ನ ಜೊತೆ ಇರುತ್ತಾಳೆ. ನೀವುಗಳಿದ್ದೀರ ಎಂದು ಕತ್ತಲಾದ ಮೇಲೂ ಅವಳು ಬಸ್ ಹಿಡಿಯಬಹುದು. ನೀವುಗಳು ಬೀದಿಯ ಕಣ್ಣುಗಳು, ಕಿವಿಗಳಿದ್ದ ಹಾಗೆ!”


ಅವತ್ತಿನ ರಾತ್ರಿ ಶಾಂತಿ
ಅಪ್ಪ–ಅಮ್ಮ
ಮಾತನಾಡುವುದನ್ನು
ಕೇಳಿಸಿಕೊಂಡಳು.


"ಯಾವ ಕಾನೂನಿನ ಬಗ್ಗೆ
ಮಾತನಾಡುತ್ತಿದ್ದೀರ, ಅಪ್ಪಾ?"
ಎಂದು ಕೇಳಿದಳು.


"ಏನಿಲ್ಲ. ಸುಮ್ನೆ ಊಟ
ಮಾಡು."

ಮಾರನೇ ದಿನ, ಶಾಂತಿ
ಶಾಲೆಯಲ್ಲಿ ಅವಳ ಗೆಳತಿ
ಜೆನಿಫರಾಳ
ಹುಡುಕಿಕೊಂಡು
ಹೋದಳು. "ಜೆನಿಫರ್,
ನೀನು ಒಂದು ಪೋಸ್ಟರ್
ಬಗ್ಗೆ ಹೇಳುತ್ತಿದ್ದೆಯಲ್ಲಾ...
ಶಾಲೆ ಬಿಟ್ಟ ಮೇಲೆ ನನಗೆ
ಅದು ತೋರಿಸುತ್ತೀಯಾ?"
ಎಂದು ಕೇಳಿದಳು.

ಅವತ್ತು ಶಾಂತಿ ಮನೆಗೆ ಬಂದಾಗ
ಹೊತ್ತಾಗಿತ್ತು. "ಎಲ್ಲಿ ಹೋಗಿದ್ದೆ?
ನನಗೆ ಚಿಂತೆಯಾಗಿತ್ತು!" ಕಮಲಾ
ಬೈದಳು.

"ಅಮ್ಮಾ, ಜೆನಿಫರ್ ನನಗೊಂದು
ಪೋಸ್ಟರ್ ತೋರಿಸಿದಳು. ನಾಳೆ
ಬೀದಿ ವ್ಯಾಪಾರಿಗಳ ಸಭೆಯನ್ನು
ಕರೆದಿದ್ದಾರೆ. ಅದೆ, ಹೊಸ
ಕಾನೂನಿನ ಬಗ್ಗೆ. ಡಿ.ಎನ್.
ರಸ್ತೆಯಲ್ಲಿರುವ ಸಂಘದಲ್ಲಿ."


ಮರುದಿನ ಕುಮಾರ್ ಮತ್ತು ಕಮಲಾ ಸಂಘಕ್ಕೆ ಹೋದರು. “ನಮಸ್ಕಾರ. ಬನ್ನಿ. ನನ್ನ ಹೆಸರು ನೀಲಾ. ಇವರು ಇಮ್ರಾನ್. ನಮ್ಮದು ಬೀದಿ ವ್ಯಾಪಾರಿ ಸಂಘಟನೆಯಿದೆ. ನಾವು ಬೀದಿ ವ್ಯಾಪಾರಿಗಳ ಹಕ್ಕಿಗಾಗಿ ಕೆಲಸ ಮಾಡುತ್ತೇವೆ. ನಮ್ಮ ಸಂಘಟನೆಯ ಸದಸ್ಯರೆಲ್ಲಾ ನಿಮ್ಮಂತಃ ಬೀದಿ ವ್ಯಾಪಾರಿಗಳು.”
STREET VENDOR LAW
“ಮೇಡಮ್, ಕೆಲವು ಗೂಂಡಾಗಳು ಬಂದು ನಮ್ಮನ್ನು ಜಾಗ ಖಾಲಿ ಮಾಡಲು ಹೇಳಿದ್ದಾರೆ. ನಾವಿರುವ ಜಾಗದಲ್ಲಿ ಮಾಲ್‌ವೊಂದನ್ನು ಕಟ್ತಾರಂತೆ,” ಎಂದರು ಕುಮಾರ್.
“೨೦೧೪ರಲ್ಲಿ ಭಾರತ ಸರ್ಕಾರ ಬೀದಿ ವ್ಯಾಪಾರ ಮಾಡುವುದು ಕಾನೂನು ವಿರೋಧವಲ್ಲ ಎಂದಿದೆ ಮತ್ತು ಯಾರು ನಿಮ್ಮನ್ನು ಈ ರೀತಿ ತಡೆಯಲಾಗುವುದಿಲ್ಲ,” ಎಂದರು ನೀಲಾ.
“ಅವರು ನಮ್ಮನ್ನು ಬೆದರಿಸಿದ್ದಾರೆ,” ಎಂದಳು ಕಮಲಾ.
“ಭಯ ಪಡಬೇಡಿ. ಈ ಸಂಘಟನೆ ನಿಮ್ಮ ಜೊತೆಯಿದೆ,” ಎಂದರು ನೀಲಾ.



ಮರುದಿನ ಗುಂಡಾಗಳ ಗುಂಪು ಹಿಂದಿರುಗಿತು. ಈ ಬಾರಿ ಬೀದಿ ವ್ಯಾಪಾರಿಗಳ ಜತೆ ಸಂಘಟನೆಯ ನೀಲಾ, ಇಮ್ರಾನ್ ಮತ್ತು ಇತರೆ ಸದಸ್ಯರೂ ಇದ್ದರು. "ಇಲ್ಲಿಂದ ಯಾರನ್ನೂ ಖಾಲಿ ಮಾಡುವಹಾಗಿಲ್ಲಾ!" ಎಂದು ಹೇಳಿದರು ಇಮ್ರಾನ್.

"ಯಾರ್ ರೀ ನೀವು?" ಎಂದ ಒಬ್ಬ ಗುಂಡಾ.

"ನಾವು ಬೀದಿ ವ್ಯಾಪಾರಿ ಸಂಘಟನೆಯವರು. ಬೀದಿಯಲ್ಲಿ ವ್ಯಾಪಾರ ಮಾಡುವುದು ನಮ್ಮ ಹಕ್ಕು! ಹೊಸ ಕಾನೂನಿನ ಪ್ರಕಾರ ಯಾವುದೇ ಬೀದಿ ವ್ಯಾಪಾರಿಯನ್ನು ಜಾಗ ಖಾಲಿ ಮಾಡಿಸುವುದಕ್ಕಾಗುವುದಿಲ್ಲ!" ಎಂದರು ನೀಲಾ. ಗುಂಡಾಗಳಿಗೆ ಸಿಟ್ಟು ಬಂದು, ವ್ಯಾಪಾರಿಗಳಿಗೆ ಹೊಡೆಯಲು ಶುರು ಮಾಡಿದರು.






ಪೋಲೀಸಪ್ಪ ಶಿವಾ ಅಲ್ಲಿಗೆ ಬಂದು ಗುಂಡಾಗಳನ್ನು ತಡೆದರು. "ನಿಲ್ಲಿಸಿ! ನಿಮ್ಮನ್ನು ಅರೆಸ್ಟ್ ಮಾಡುತ್ತೇನೆ!" ಎಂದು ಗದರಿದರು. "ಹೊಸ ಕಾನೂನು ಬಂದ ಮೇಲೆ ಯಾವುದೇ ಬೀದಿ ವ್ಯಾಪಾರಿಯನ್ನು ಎತ್ತಂಗಡಿ ಮಾಡಲಾಗುವುದಿಲ್ಲ. ಅದು ಅಲ್ಲದೆ, ಅವರನ್ನು ಹೊಡೆಯಲು ನೀವು ಯಾರು?!"

"ನಾನು ಕರೆದ ಕೂಡಲೆ ಬಂದಿದ್ದಕ್ಕೆ ಧನ್ಯವಾದಗಳು, ಸಾರ್," ಎಂದನು ಕುಮಾರ್.

"ಬೀದಿ ವ್ಯಾಪಾರಿಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯ," ಎಂದನು ಪೋಲೀಸಪ್ಪ ಶಿವಾ.



ಮುಂದಿನ ವಾರ, ಎಲ್ಲಾ ಬೀದಿ ವ್ಯಾಪಾರಿಗಳು ಸಂಘಟನೆಯ ಸಭೆಯಲ್ಲಿ ಭಾಗವಹಿಸಿದರು.
ಕಾನೂನನ್ನು ವಿವರಿಸುತ್ತಾ, ನೀಲಾ: "೨೦೧೪ರಲ್ಲಿ ಭಾರತ ಸರ್ಕಾರವು ಬೀದಿ ವ್ಯಾಪಾರದ ಕಾನೂನನ್ನು ಜಾರಿಗೊಳಿಸಿತು. ಈ ಕಾನೂನಿನ ಪ್ರಕಾರ ಬೀದಿಯಲ್ಲಿ ವ್ಯಾಪಾರ ಮಾಡುವುದು ಕಾನೂನು ಬದ್ಧ. ಪಕ್ಕ ಲೀಗಲ್! ಯಾರು ನಿಮ್ಮನ್ನು ತಡೆಯುವುದಕ್ಕಾಗುವುದಿಲ್ಲ."
ಸೇರಿದವರು ಬಹಳಷ್ಟು ಪ್ರಶ್ನೆಗಳನ್ನು ಕೇಳಿದರು: "ಈ ಕಾನೂನು ಹೇಗೆ ಬಂತು? ಯಾರು ತಡೆಯುವುದಕ್ಕಾಗುವುದಿಲ್ಲ ಎಂದರೇನು? ಕಾನೂನು ಎತ್ತಂಗಡಿಯಾಗುವುದನ್ನು ತಡೆಯುತ್ತದೆಯೇ? ಹೊಸ ಕಾನೂನು ಅಂದರೇನು?"
ಒಂದೊಂದಾಗಿ ನೀಲಾ ಮತ್ತು ಇಮ್ರಾನ್ ಉತ್ತರಿಸಲು ಶುರು ಮಾಡಿದರು.



“ಈ ಕಾನೂನು ಹೇಗೆ ಬಂತು?”
ಬೀದಿ ವ್ಯಾಪಾರಿಗಳ ಜೀವನೋಪಾಯದ ರಕ್ಷಣೆ ಹಾಗು ನಿಯಂತ್ರಣ ಕಾಯ್ದೆ, 2014
ರಾಷ್ಟ್ರೀಯ ನೀತಿ
ನಾವು ಕೇಳುವುದು ನಮ್ಮ ಹಕ್ಕು, ಭಿಕ್ಷೆಯಲ್ಲ
“ಮುಂಚೆ, ಬೀದಿ ವ್ಯಾಪಾರಿಗಳಿಗೆಂದೇ ಕಾನೂನು ಇರಲಿಲ್ಲ. ಬಹಳ ಹಿಂದೆ ಹಲವಾರು ಸಂಘಟನೆಗಳು ಕೈಜೋಡಿಸಿ ಪ್ರತಿಭಟನೆಗಳು ಮಾಡಿದರು. ಆಗ, ಬೀದಿ ವ್ಯಾಪಾರಿಗಳಿಗಾಗಿ ರಾಷ್ಟ್ರೀಯ ನೀತಿಯೊಂದನ್ನು 2009ರಲ್ಲಿ ಯೋಜಿಸಿದರು. ಆ ನಂತರ ಮಹರಾಷ್ಟ್ರ ಎಕ್ತಾ ಹಾಕರ್ಸ್ ಯೂನಿಯನ್ ರವರು 2013ರಲ್ಲಿ ಸರ್ವೋಚ್ಚ ನ್ಯಾಯಾಲಯದಿಂದ ಬೀದಿ ವ್ಯಾಪಾರಿಗಳ ಪರವಾಗಿ ತೀರ್ಪೊಂದನ್ನು ಪಡೆದರು. ಈ ಸಂಘಟನೆ, ನಿಮ್ಮ–ನಮ್ಮ ತರಹದ ಸಂಘಟನೆ. ಇದಾದ ಮೇಲೆ ಬೀದಿ ವ್ಯಾಪಾರಿಗಳ ಜೀವನೋಪಾಯದ ರಕ್ಷಣೆ ಹಾಗು ನಿಯಂತ್ರಣ ಕಾಯ್ದೆ 2014 ಜಾರಿಗೆ ಬಂತು. ಈ ಹೊಸ ಕಾನೂನು ಬೀದಿ ವ್ಯಾಪಾರ ಮಾಡುವುದು ನಿಮ್ಮ ಹಕ್ಕು ಎಂದು ಗುರುತಿಸಿತು,” ಎಂದರು ನೀಲಾ.




“ನೀವು ಯಾವುದೇ ಹಳ್ಳಿಯಿಂದ, ರಾಜ್ಯದಿಂದ ಬಂದಿದ್ದರೂ ನಿಮ್ಮ ವ್ಯಾಪಾರ ಮಾಡುವ ಹಕ್ಕನ್ನು ಈ ಹೊಸ ಕಾನೂನು ಎತ್ತಿ ಹಿಡಿಯುತ್ತದೆ,” ಎಂದರು ಇಮ್ರಾನ್. “ಬೆಂಗಳೂರಿನಲ್ಲಿರುವ ವಿಪ್ರೋ, ಇನ್ಫೋಸಿಸ್ ಅಂತಹ ದೊಡ್ಡ ಕಂಪನಿಗಳಲ್ಲಿ ಕೆಲಸ ಮಾಡಲು ಹಲವಾರು ಜನರು ಉತ್ತರ ಭಾರತದಿಂದ ಬರುತ್ತಾರೆ. ಯಾಕೆಂದರೆ, ಭಾರತೀಯರಾಗಿ ನಮಗೆ ಉದ್ಯೋಗಕ್ಕಾಗಿ ಯಾವುದೇ ನಗರಕ್ಕಾಗಲಿ, ಹಳ್ಳಿಗಾಗಲಿ ಹೋಗಬಹುದು. ಅದು ನಮ್ಮ ಹಕ್ಕು. ಅದೇ ತರಹ, ಯಾವುದೇ ರಾಜ್ಯದಿಂದಾಗಲಿ, ಹಳ್ಳಿಯಿಂದಾಗಲೀ ವ್ಯಾಪಾರ ಮಾಡಲು ಬರಬಹುದು. ಈ ಹೊಸ ಕಾನೂನು ಈ ಹಕ್ಕನ್ನು ನಿಮಗೆ ಕೊಡುತ್ತದೆ, ಮತ್ತೆ ವ್ಯಾಪಾರ ಪಕ್ಕ ಲೀಗಲ್ ಎಂದು ಹೇಳುತ್ತದೆ!”






ವ್ಯಾಪಾರಿಗಳಿಗೆ ಮತ್ತೊಂದು ಪ್ರಶ್ನೆ ಹುಟ್ಟಿತು: “ನಾವು ಬೀದಿ ವ್ಯಾಪಾರಿಗಳೆಂದು ಸರ್ಕಾರಕ್ಕೆ ಹೇಗೆ ತಿಳಿಯುತ್ತದೆ?”
“ಮೊದಲನೆಯದಾಗಿ ಬಿ.ಬಿ.ಎಂ.ಪಿಯು ನಗರದಲ್ಲಿರುವ ಎಲ್ಲಾ ಬೀದಿ ವ್ಯಾಪಾರಸ್ಥರ ಸಮೀಕ್ಷೆಯನ್ನು ಮಾಡಬೇಕು. ಈ ಕಾನೂನಿನಲ್ಲಿ ಈ ಸಮೀಕ್ಷೆಯಾಗುವ ತನಕ ಯಾವುದೇ ಬೀದಿ ವ್ಯಾಪಾರಿಯನ್ನು ಎತ್ತಂಗಡಿ ಮಾಡುವಹಾಗಿಲ್ಲ ಎಂದು ಹೇಳಲಾಗಿದೆ,” ಎಂದರು ಇಮ್ರಾನ್.
BBMP



“ಈ ಸಮೀಕ್ಷೆ ಮಾಡಲು, ಬಿ.ಬಿ.ಎಂ.ಪಿಯು ಪಟ್ಟಣ ವ್ಯಾಪಾರ ಸಮಿತಿಯನ್ನು ರಚಿಸಬೇಕು. ಅದರಲ್ಲಿ ಶೇಖಡ 40ರಷ್ಟು ಬೀದಿ ವ್ಯಾಪಾರಿಗಳಿರುತ್ತಾರೆ. ಮಿಕ್ಕವರು ಬಿ.ಬಿ.ಎಂ.ಪಿ ಸದಸ್ಯರು, ಪೋಲೀಸ್ ಸಿಬ್ಬಂದ್ಧಿ, ನಿವಾಸಿಗಳ ಸಂಘದವರು, ಎನ್.ಜಿ.ಓರವರು, ಮುಂತಾದವರು ಇರುತ್ತಾರೆ. ಕಾನೂನಿನ ಪ್ರಕಾರ ಶೇಖಡಾ 40ರಷ್ಟು ಬೀದಿ ವ್ಯಾಪಾರಿಗಳು ಈ ಸಮಿತಿಯಲ್ಲಿ ಇರಲೇ ಬೇಕು.”



"ಕೆಲವೊಮ್ಮೆ ಸಂಚಾರಿ ಪೋಲೀಸರು ಬೀದಿ ವ್ಯಾಪಾರಿಗಳನ್ನು ಓಡಿಸುತ್ತಾರೆ. ಪಾದಚಾರಿಗಳಿಗೆ ಅಡ್ಡಿ ಇದ್ದೀರ, ವ್ಯಾಪಾರಿಗಳಿಂದ ಟ್ರಾಫಿಕ್ ಜ್ಯಾಮ್ ಆಗುತ್ತೆ ಅಂತ. ಆದರೆ, ಪಾದಚಾರಿಗಳಿಗೂ, ಬೀದಿ ವ್ಯಾಪಾರಿಗಳಿಗೂ ಪರಸ್ಪರ ಸಂಬಂಧವಿದೆ ಎಂದು ಯಾರೂ ಸಹ ಪರಿಗಣಿಸುವುದಿಲ್ಲ. ಆದರೆ, ಯಾರು ಸಹ ಕಾರುಗಳಿಂದ ಟ್ರಾಫಿಕ್ ಜ್ಯಾಮ್ ಆಗುತ್ತದೆ ಎಂದು ವಿಚಾರ ಮಾಡುವುದಿಲ್ಲ..."



"...ಎಲ್ಲರೂ ಬೀದಿ ವ್ಯಾಪಾರಿಗಳನ್ನು ಬಯ್ಯುತ್ತಾರೆ. ನಾವು ಪ್ರಾಮಾಣಿಕವಾಗಿ ದುಡಿಯುತ್ತಿದ್ದೇವೆ ಎಂದು ಯೋಚಿಸುವುದಿಲ್ಲ. ದೊಡ್ಡ ದೊಡ್ಡ ಕಾರುಗಳಲ್ಲಿ ಒಬ್ಬರೇ ಕೂತು ಹೋಗುತ್ತಿರುತ್ತಾರೆ. ಅವುಗಳು ಹಾದಿಗಟ್ಟುವುದಿಲ್ಲವೇ? ನಾವುಗಳು ಅಡ್ಡಿಯಾಗುತ್ತೇವೆ ಅನ್ನುತ್ತಾರೆ. ಆದರೆ ಈ ಮಾಲಿನ್ಯ ಎಸಗುವ ಗಾಡಿಗಳ ಮೇಲೆ ಯಾರ ಕಣ್ಣು ಬೀಳುವುದಿಲ್ಲವೇ?" ಎಂದು ನಿಟ್ಟುಸಿರು ಬಿಟ್ಟರು ಮುನಿರಾಜು.



“ನಿವಾಸಿಗಳು ಅಥವಾ ಅಂಗಡಿಯವರು ನಮ್ಮನ್ನು ಎತ್ತಂಗಡಿ ಮಾಡಲು ಬೆದರಿಸಿದರೆ?”
“ಅವರುಗಳ ಮನೆ ಅಥವಾ ಅಂಗಡಿಗಳಿಗೆ ಅಡ್ಡಿಯಾಗಿ ನಿಲ್ಲದಿದ್ದರೆ ಸರಿ,” ಎಂದರು ನೀಲಾ. “ಯಾರಿಗೂ ತೊಂದರೆ ಆಗದಂತೆ ವ್ಯಾಪಾರ ಮಾಡಿದರೆ, ಯಾರು ನಮಗೆ ತೊಂದರೆ ಮಾಡಬಾರದು. ಸಮಸ್ಯೆ ಆದರೆ ಪರಿಹಾರ ಹುಡುಕಬಹುದಲ್ಲವೇ? ಹಾಗು ಸಹ ಅವರು ಜೋರು ಮಾಡಿದರೆ ಸಭ್ಯವಾಗಿ ಹೇಳಿ – ಬಿ.ಬಿ.ಎಂ.ಪಿಯವರು ನಮಗೆ ಎಲ್ಲಿ ವ್ಯಾಪಾರ ಮಾಡಬಹುದು, ಎಲ್ಲಿ ಇಲ್ಲ ಎಂದು ಹೇಳುತ್ತಾರೆಂದು. ಮತ್ತೆ ಸಂಘತನೆಯವರಿಗೆ ತಿಳಿಸಿ. ಕೆಲವು ಸಲ ಪೋಲೀಸರು ಕರ್ನಾಟಕ ಪೋಲೀಸ್ ಕಾಯ್ದೆಯಡಿಯಲ್ಲಿ ಕಲಂ 92(ಜಿ) ಅಥವಾ ಐ.ಪಿ.ಸಿ ಕಲಂ 283 ಪ್ರಕಾರ ಚಿಲ್ಲರೆ ಕೇಸುಗಳನ್ನು ಬೀದಿ ವ್ಯಾಪಾರಿಗಳ ವಿರುದ್ಧ ಹಾಕುತ್ತಾರೆ. ಹಾಗಾದಾಗ, ನೀವು ದಂಡ ಕಟ್ಟ ಬೇಡಿ. ಕಟ್ಟಿದರೆ ನೀವು ತಪ್ಪಿತಸ್ಥರು ಎಂದಾಗುತ್ತದೆ. ಬೀದಿಯಲ್ಲಿ ವ್ಯಾಪಾರ ಮಾಡುವುದು ಅಪರಾಧವಲ್ಲ – ಅದು ಪಕ್ಕಾ ಲೀಗಲ್! ಪೋಲೀಸ್ ರವರಿಗೆ ಆ ಕೇಸುಗಳನ್ನು ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗುತ್ತೀರ ಎಂದು ಹೇಳಿ. ಸಂಘಟನೆಗೆ ಆ ನಂತರ ಮಾತನಾಡಿಸಿ. ಪೋಲೀಸ್ ಕಮಿಷನರ್ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಎಲ್ಲಾ ಪೋಲೀಸ್ ಸಿಬ್ಬಂದ್ದಿಗಳು ಬೀದಿ ವ್ಯಾಪಾರಿ ಕಾನೂನಿನ ಬಗ್ಗೆ ತಿಳಿದುಕೊಳ್ಳಬೇಕೆಂದು.”



“ಬೀದಿ ವ್ಯಾಪಾರಿಗಳಿಂದ ಹಫ್ತಾ ಕೇಳುವುದು ಅಪರಾಧ. ಸರ್ವೋಚ್ಚ ನ್ಯಾಯಾಲಯವು ಸಹ ಇಂತಹ ಅನ್ಯಾಯದ ಬಗ್ಗೆ ಹೇಳುತ್ತಾ – ‘ಪೋಲೀಸರು, ಸ್ಥಳೀಯ ಅಧಿಕಾರಿಗಳು ಬೀದಿ ವ್ಯಾಪಾರಿಗಳಿಂದ ಲಂಚ ವಸೂಲಿ ಮಾಡುತ್ತಾರೆ, ಅವರನ್ನು ಕೀಳಾಗಿ ನೋಡುತ್ತಾರೆ, ಮತ್ತು ನೆಮ್ಮದಿಯಿಂದ ವ್ಯಾಪಾರ ಮಾಡಲು ಬಿಡುವುದಿಲ್ಲ. ಬಹುಷ: ಈ ಕ್ಷುಲ್ಲಕ ಸರ್ಕಾರಿ ಅಧಿಕಾರಿಗಳಿಗೆ ಸಂವಿಧಾನದ ಮುನ್ನುಡಿಯಲ್ಲಿರುವ ‘ಘನತೆ’ಯೆಂಬ ಪದದ ಅರ್ಥ ಮತ್ತು ಮೌಲ್ಯ ತಿಳಿದಿಲ್ಲದಿರುವ ಹಾಗೆ ಕಾಣಿಸುತ್ತದೆ.’”


“ಬೀದಿ ವ್ಯಾಪಾರಿಗಳಿದ್ದಲ್ಲಿ ಸಾಕಷ್ಟು ಜನರು ಇರುತ್ತಾರೆ. ಹಾಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ಸಣ್ಣ–ಪುಟ್ಟ ಕಳ್ಳತನಗಳು ಆಗುವುದಿಲ್ಲ. ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳದ ಅನುಭವವಾಗುವುದಿಲ್ಲ. ಬೀದಿ ವ್ಯಾಪಾರಿಗಳು ನಗರದ ಜಾಗಗಳನ್ನು ಹೆಣ್ಣುಮಕ್ಕಳಿಗೆ, ವೃದ್ಧರಿಗೆ ಮತ್ತು ಮಕ್ಕಳಿಗೆ ಸುರುಕ್ಷಿತಗೊಳಿಸುತ್ತಾರೆ.”
ಸುರಕ್ಷಿತ ಬೀದಿಗಳು
“ನಗರದಲ್ಲಿರುವ ರಿಕ್ಷಾ ಚಾಲಕರಿಗೆ, ಕಾರ್ಮಿಕರಿಗೆ ಬೀದಿ ವ್ಯಾಪಾರಿಗಳು ಕಡಿಮೆ ದರದಲ್ಲಿ ಹಾಗು ಸುಲಭವಾಗಿ ಊಟ–ತಿಂಡಿಗಳನ್ನು ನೀಡುತ್ತಾರೆ. ಬೀದಿ ವ್ಯಾಪಾರಿಗಳಿಲ್ಲದಿದ್ದರೆ ಕಾರ್ಮಿಕರು ಹೋಟೇಲುಗಳಲ್ಲಿ ಊಟ ಮಾಡಲು ಆಗುತ್ತಿತ್ತೆ?”
“ಬೀದಿ ವ್ಯಾಪಾರಿಗಳು ಪರಿಸರ ಸ್ನೇಹಿಗಳು. ಅವರು ತಳ್ಳುವ ಗಾಡಿ, ಸೈಕಲ್ಲು, ಬುಟ್ಟಿಗಳಲ್ಲಿ ವ್ಯಾಪಾರ ಮಾಡುವ ಕಾರಣ ಯಾವುದೇ ರೀತಿಯ ಮಾಲಿನ್ಯ ಮಾಡುವುದಿಲ್ಲ. ಬೀದಿ ವ್ಯಾಪರಿಗಳ ಒಕ್ಕೂಟದ ವತಿಯಿಂದ ಎಲ್ಲಾ ಬೀದಿ ವ್ಯಾಪಾರಿಗಳಿಗೆ ಬಾಳೆ ಎಲೆ, ಮರುಬಳಿಕೆ ಮಾಡಿರುವ ಪೇಪರ್, ಮುಂತಾದ ಜೈವಿಕ ಉತ್ಪನ್ನಗಳನ್ನು ಉಪಯೋಗಿಸಲು ಪ್ರೋತ್ಸಾಹ ಮಾಡುತ್ತಿದ್ದೇವೆ.”


“ಬಿ.ಬಿ.ಎಂ.ಪಿಯು ಸಹ ಬೀದಿ
ವ್ಯಾಪಾರಿಗಳನ್ನು ಒಕ್ಕಲೆಬ್ಬಿಸಲು
ಸಾಧ್ಯವಿಲ್ಲ. ಮೊದಲು ಅವರು ಸಮೀಕ್ಷೆ
ನಡೆಸಿ, ಗುರುತಿನ ಚೀಟಿ ಹಂಚಬೇಕು.
ಈ ಬಗ್ಗೆ ಬಿ.ಬಿ.ಎಂ.ಪಿಯು
ಸೂಚನೆಯನ್ನು ಸಹ ಹೊರಡಿಸಿದೆ.
ಯಾವುದೇ ಬೀದಿ ವ್ಯಾಪಾರಿಯನ್ನು
ಒಕ್ಕಲೆಬ್ಬಿಸುವುದಾಗಲಿ,
ಮರುಸ್ಥಾಪಿಸುವುದಾಗಲಿ
ಮಾಡುವಂತಿಲ್ಲ. ಬಿ.ಬಿ.ಎಂ.ಪಿಯು
ಪಾದಚಾರಿ ಮಾರ್ಗಗಳನ್ನು
ಅತಿಕ್ರಮಣಗಳನ್ನು ತೆಗೆದುಹಾಕುವಾಗ
ಬೀದಿ ವ್ಯಾಪಾರಿಗಳ ಕಾನೂನನ್ನು
ಉಲ್ಲಂಘಿಸದೆ, ವ್ಯಾಪಾರಿಗಳಿಗೆ
ತೊಂದರೆಯಾಗದಂತೆ
ನೋಡಿಕೊಳ್ಳಬೇಕು. ಹಾಗೇನಾದರೂ
ಆದರೆ, ಅದು ಕಾನೂನಿನ ವಿರುದ್ಧ!”
ಗುರುತಿನ ಚೀಟಿ
BBMP


ಕರ್ನಾಟಕ ಪೋಲೀಸ್ ಕೈಪಿಡಿ
“ಕರ್ನಾಟಕ ಪೋಲೀಸ್
ಕೈಪಿಡಿಯಲ್ಲಿ ಪೋಲೀಸ್
ಸಿಬ್ಬಂದ್ದಿಗಳು ವಿನಯದಿಂದ
ಹಾಗು ಬಹುವಚನದಲ್ಲಿ
ಮಾತನಾಡಬೇಕೆಂದು ಹೇಳಿದೆ.”
“ಒಂದು ಕ್ಷಣಕ್ಕೆ ಯಾರೋ
ನಮ್ಮನ್ನು ಒಕ್ಕಲೆಬ್ಬಿಸಲು
ಪ್ರಯತ್ನಿಸುತ್ತಿದ್ದಾರೆಂದು
ಭಾವಿಸೋಣ. ನಾವು ಬೀದಿಯಲ್ಲಿ
ವ್ಯಾಪಾರ ಮಾಡುತ್ತಿರುವುದು
ತಪ್ಪು ಎಂದು ಹೇಳುತ್ತಿದ್ದಾರೆ.”


“ಬೀದಿ ವ್ಯಾಪಾರವೇ ನಮ್ಮ ಜೀವನೋಪಾಯ. ಬಹಳ ಕಡಿಮೆ ಸಂಪಾದನೆಯಾಗುತ್ತದೆ. ನಮ್ಮ ಹತ್ತಿರ ಅಂಗಡಿಗೆ ಬಾಡಿಗೆ ಕೋಡಲು ಹಣವಿದ್ದರೆ, ನಾವ್ಯಾಕೆ ಸುಡು ಬಿಸಿಲಲ್ಲಿ, ಮಳೆಯಲ್ಲಿ ನಿಂತು ವ್ಯಾಪಾರ ಮಾಡುತ್ತಿದ್ವಿ? ನಾವು ಪ್ರಾಮಾಣಿಕವಾಗಿ ದುಡಿದು ನಮ್ಮ ಕುಟುಂಬವನ್ನು ಸಾಕುತ್ತಿದ್ದೇವೆ. ನಾವು ಯಾರ ಮೇಲು ಅವಲಂಬಿತರಲ್ಲ. ನಾವು ಉದ್ಯಮಿಗಳು! ಬೀದಿಯಲ್ಲಿ ವ್ಯಾಪಾರ ಮಾಡುವುದು ನಮ್ಮ ಹಕ್ಕು!”
“ನಮ್ಮಂತಹ ಜನರು ಹಳ್ಳಿಗಳಲ್ಲಿ ಮಳೆ–ಬೆಳೆ ಇಲ್ಲದಿದ್ದ ಕಾರಣ ನಗರಕ್ಕೆ ಕೆಲಸ ಹುಡುಕಿಕೊಂಡು ಬಂದಿರುವುದು. ಇಲ್ಲಾ ಬೀದಿ ವ್ಯಾಪಾರ ಮಾಡಬೇಕು, ಅಥವಾ ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡಬೇಕು. ಇದರಲ್ಲಿ ಓದು–ಬರಹ ಗೊತ್ತಿರಬೇಕು, ಇಂತಹ ವಯಸ್ಸಿನವರಿರಬೇಕು, ಇದೇ ಭಾಷೇ ಬರಬೇಕು ಅಂತ ಇಲ್ಲ. ನಾವು ಕೆಲವರು ಡಿಪ್ಲೊಮಾವನ್ನು ಹೊಂದಿದ್ದೇವೆ. ಸರ್ಕಾರಿ ಕೆಲಸವಾಗಲಿ, ಖಾಸಗಿ ಕೆಲಸವಾಗಲಿ ಸಿಗದಿರುವ ಕಾರಣ, ಬೀದಿ ವ್ಯಾಪರವನ್ನು ನಮ್ಮ ಜೀವನೋಪಾಯವಾಗಿ ಒಪ್ಪಿಕೊಂಡಿದ್ದೇವೆ.”


“ಬೆಂಗಳೂರನ್ನು
ಕೆ.ಆರ್.ಮಾರುಕಟ್ಟೆ, ಗಾಂಧಿ
ಬಜಾರ್, ಮೆಜೆಸ್ಟಿಕ್,
ಅಥವಾ ಮಲ್ಲೇಶ್ವರಂ ಆನೇ
ಕ್ರಾಸ್ ಅಂತಹ
ಮಾರುಕಟ್ಟೆಗಳಿಲ್ಲದೆ
ಕಲ್ಪಿಸಿಕೊಳ್ಳಲಾಗುತ್ತದೆಯೇ?
ನಗರದಲ್ಲಿ ಬೀದಿ
ವ್ಯಾಪಾರಿಗಳಿಲ್ಲದಿದ್ದರೆ
ಹೇಗಿರುವುದು ಎಂದು
ಯೋಚನೆ ಮಾಡಿದ್ದೀರಾ?”
“ರೋಗದಿಂದ ನರಳುತ್ತಿರುವ,
ಮಾಲಿನ್ಯವನ್ನು ಕೆಮ್ಮುತ್ತಿರುವ
ನಗರವು ನಮಗೆ ಬೇಕೆ?
ಹೃದಯವಿಲ್ಲದಿರುವ, ಆತ್ಮಸಾಕ್ಷಿ
ಇಲ್ಲದಿರುವ ನಗರ...”


"ಭಾರತೀಯ ಕಾನೂನಿನಡಯಲ್ಲಿ ಬೀದಿಯಲ್ಲಿ ವ್ಯಾಪಾರ ಮಾಡುವುದು ನಮ್ಮ ಹಕ್ಕು. ನಮ್ಮಿಂದ ಯಾರೂ ಅದನ್ನು ಕಿತ್ತುಕೊಳ್ಳಲಾಗುವುದಿಲ್ಲ!"
"ಬೀದಿ ವ್ಯಾಪಾರಿಗಳೇ ಒಂದಾಗಿ, ಹೋರಾಟಕ್ಕೆ ಮುಂದಾಗಿ!"
"ಬೀದಿ ವ್ಯಾಪಾರಿಗಳು ನಗರದ ಜೀವಾಂಶ. ಬನ್ನಿ ಅವರನ್ನು ಬೆಂಬಲಿಸೋಣ!"

# ಬೀದಿ ವ್ಯಾಪಾರಿ ಕಾಯ್ದೆಯಡಿ ನಮ್ಮ ಹಕ್ಕುಗಳು

ಬೀದಿ ವ್ಯಾಪಾರ ಮಾಡುವ ಹಕ್ಕು

ಪಟ್ಟಣ ವ್ಯಾಪಾರ ಸಮಿತಿ ಚುನಾವಣೆಯಲ್ಲಿ ಭಾಗವಹಿಸಬಹುದು

ಪೋಲೀಸ್ ಹಾಗು ಇತರೆ ಅಧಿಕಾರಿಗಳಿಂದ ಕಿರುಕುಳ–ಮುಕ್ತ ವ್ಯಾಪಾರದ ವಾತಾವರಣ

ಕಲಂ 3 (3) ರಲ್ಲಿ ನಮೂದಿಸಿದ ಸಮೀಕ್ಷೆ ಆಗುವ ತನಕ ಎತ್ತಂಗಡಿಗೆ ಅಥವಾ ಮರುಸ್ಥಾಪನೆಗೆ ಒಳಗಾಗಬಾರದು

ಸಮಸ್ಯೆ ಆದಲ್ಲಿ ವಿವಾದ ನಿವಾರಣ ವೇದಿಕೆಯನ್ನು ಪ್ರಸ್ಥಾಪಿಸಬಹುದು

ಮರುಸ್ಥಾಪನೆಯಾದ ಸಂದರ್ಭದಲ್ಲಿ ಮರುಸ್ಥಾಪನೆಯ ಜಾಗವನ್ನು ತೀರ್ಮಾನಿಸುವ ಪ್ರಕ್ರಿಯಯಲ್ಲಿ ಭಾಗವಹಿಸಬಹುದು

ಮರುಸ್ಥಾಪನೆಯಾದಾಗ, ಇದ್ದ ಜಾಗಕ್ಕಿಂತ ಹೆಚ್ಚಿಗೆ ಅಥವ ಸಮವಾಗಿ ವ್ಯಾಪಾರ ಆಗುವಂತಹ ಜಾಗಕ್ಕೆ ಮರುಸ್ಥಾಪನೆಯಾಗಬೇಕು

ರೂಢಿಗತ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿದ್ದರೆ, ಮರುಸ್ಥಾಪನೆ ಮಾಡಲಾಗುವುದಿಲ್ಲ

30 ದಿನಗಳ ನೋಟೀಸ್ ಇಲ್ಲದೆ ಮರುಸ್ಥಾಪನೆ ಮಾಡುವಂತಿಲ್ಲ

30 ದಿವಸ ನೋಟೀಸ್ ಇಲ್ಲದೆ ಎತ್ತಂಗಡಿ ಮಾಡುವಂತಿಲ್ಲ

ಸರಕನ್ನು ವಶ ಪಡಿಸುವ ಸಂಧರ್ಬದಲ್ಲಿ, ನಿಯಮಗಳಿಗನುಸಾರ ಮಾತ್ರ ಮಾಡಬೇಕು ಹಾಗು ವ್ಯಾಪಾರಿಗಳು ವಶಪಡಿಸಲಾದ ಸರಕನ್ನು ಹಿಂಪಡೆಯಬಹುದು

# ಕಾನೂನನ್ನು ಜಾರಿಗೆ ತರಲು ಕೈಗೊಳ್ಳಬೇಕಾದ ಕ್ರಮಗಳು

| ಕೈಗೊಳ್ಳಬೇಕಾದ ಕ್ರಮಗಳು | ಜವಾಬ್ದಾರಸ್ಥರು | ಸಂಬಂಧಪಟ್ಟ ಕಾನೂನಿನ ಅಂಶಗಳು |
|---|---|---|
| 1. ಬೀದಿ ವ್ಯಾಪರಿಗಳ ಕಾನೂನಿನಡಿಯಲ್ಲಿ ನಿಯಮಗಳ ರಚನೆ<br>ಪಟ್ಟಣ ವ್ಯಾಪರ ಸಮಿತಿಯ ರಚನೆ, ಸಮಿತಿಯ ಚುನಾವಣೆಯ ರೀತಿ, ಮುಂತಾದ ಮುಖ್ಯಾಂಶಗಳನ್ನು ನಿಯಮಗಳಲ್ಲಿ ಸೂಚಿಸಲಾಗುತ್ತದೆ | **ರಾಜ್ಯ ಸರ್ಕಾರ** | 36. **ನಿಯಮಗಳನ್ನು ರಚಿಸುವ ಅಧಿಕಾರ**<br>(1) ಯಥೋಚಿತ ಸರ್ಕಾರವು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದೊಳಗೆ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು. |
| 2. ಪಟ್ಟಣ ವ್ಯಾಪರ ಸಮಿತಿಯ ರಚನೆ | **ರಾಜ್ಯ ಸರ್ಕಾರ** | 22. ಯಥೋಚಿತ ಸರ್ಕಾರವು ಈ ಸಂಬಂಧದಲ್ಲಿ ಮಾಡಲಾದ ನಿಯಮಗಳನ್ನು ಮಾಡುವ ಮೂಲಕ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರದಲ್ಲಿಯೂ ಪಟ್ಟಣ ವ್ಯಾಪಾರ ಸಮಿತಿಯನ್ನು ರಚನೆಗೆ ನಿಬಂಧನೆ ಮತ್ತು ರೀತಿಗೆ ಉಪಬಂಧ ಕಲ್ಪಿಸಬಹುದು. ಪರಂತು, ಯಥೋಚಿತ ಸರ್ಕಾರವು ಅವಶ್ಯಕವೆಂದು ಪರಿಗಣಿಸಿದರೆ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರದಲ್ಲಿ ಒಂದಕ್ಕಿಂತ ಹೆಚ್ಚು ಪಟ್ಟಣ ವ್ಯಾಪಾರ ಸಮಿತಿಯ ರಚನೆಗೆ ಅಥವಾ ಪ್ರತಿಯೊಂದು ವಲಯ ಅಥವಾ ವಾರ್ಡಿಗೆ ಪಟ್ಟಣ ವ್ಯಾಪಾರ ಸಮಿತಿ ರಚನೆಗೆ ಉಪಬಂಧ ಕಲ್ಪಿಸಬಹುದು. |
| 3. ಕಾರ್ಯಾಯೋಜನೆಯನ್ನು ರೂಪಿಸುವುದು<br>ಕಾರ್ಯಾಯೋಜನೆಯಲ್ಲಿ ಸಮೀಕ್ಷೆ ಮಾಡುವ ವಿಧಾನ, ವ್ಯಾಪರ ಪ್ರಮಾಣ ಪತ್ರವನ್ನು ಹಂಚಲು ನಿಬಂಧನೆಗಳು ಮತ್ತು ಷರತ್ತುಗಳು, ಸ್ಥಳಾಂತರಗೊಳಿಸುವ ತತ್ವಗಳು, ಮುಂತಾದವುಗಳನ್ನು ಸೂಚಿಸುವುದು | **ರಾಜ್ಯ ಸರ್ಕಾರವು ಸ್ಥಳೀಯ ಪ್ರಾಧಿಕಾರ ಹಾಗು ಪಟ್ಟಣ ವ್ಯಾಪಾರ ಸಮಿತಿಯ ಜೊತೆಯಲ್ಲಿ ರಚಿಸಬೇಕು** | 38. **ಬೀದಿ ವ್ಯಾಪಾರಿಗಳಿಗೆ ಕಾರ್ಯ ಯೋಜನೆ:**<br>(೧) ಈ ಅಧಿನಿಯಮದ ಉದ್ದೇಶಗಳಿಗಾಗಿ ಯಥೋಚಿತ ಸರ್ಕಾರವು ಈ ಅಧಿನಿಯಮದ ಪ್ರಾರಂಭದಿಂದ ಆರು ತಿಂಗಳೊಳಗೆ ಸ್ಥಳೀಯ ಪ್ರಾಧಿಕಾರ ಮತ್ತು ಪಟ್ಟಣ ವ್ಯಾಪಾರ ಸಮಿತಿಯೊಡನೆ ವಿದ್ಯುಕ್ತವಾಗಿ ಸಮಾಲೋಚಿಸಿದ ನಂತರ ಎರಡನೇ ಪರಿಶಿಷ್ಟದಲ್ಲಿ ಉಪಬಂಧಿಸಿರುವ ಎಲ್ಲಾ ಅಥವಾ ಯಾವುದೇ ವಿಷಯಗಳನ್ನು ನಿರ್ದಿಷ್ಟಪಡಿಸಬಹುದಾದಂತೆ ಅಧಿಸೂಚನೆ ದ್ವಾರಾ ಒಂದು ಕಾರ್ಯಯೋಜನೆಯನ್ನು ರೂಪಿಸತಕ್ಕದ್ದು. |
| 4. ಎಲ್ಲಾ ಬೀದಿ ವ್ಯಾಪಾರಿಗಳ ಸಮೀಕ್ಷೆ ನಡೆಸುವುದು | **ಪಟ್ಟಣ ವ್ಯಾಪಾರ ಸಮಿತಿ** | 3. **ಬೀದಿ ವ್ಯಾಪಾರಿಗಳ ಸಮೀಕ್ಷೆ ಮತ್ತು ಒಕ್ಕಲೆಬ್ಬಿಸುವ ಅಥವಾ ಮರುಸ್ಥಾಪನೆಯ ವಿರುದ್ಧ ರಕ್ಷಣೆ**<br>(1) ಪಟ್ಟಣ ವ್ಯಾಪಾರ ಸಮಿತಿಯು, ಕಾರ್ಯಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಕಾಲಾವಧಿಯೊಳಗೆ ಮತ್ತು ರೀತಿಯಲ್ಲಿ ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ಹಾಲಿ ಇರುವ ಎಲ್ಲಾ ಬೀದಿ ವ್ಯಾಪಾರಿಗಳ ಕುರಿತಂತೆ ಒಂದು ಸಮೀಕ್ಷೆಯನ್ನು ಮಾಡತಕ್ಕದ್ದು ಮತ್ತು ತರುವಾಯದ ಸಮೀಕ್ಷೆಯನ್ನು ಐದು ವರ್ಷಗಳಿಗೊಮ್ಮೆಯಾದರೂ ಮಾಡತಕ್ಕದ್ದು. |
| 5. ಬೀದಿ ವ್ಯಾಪಾರವನ್ನು ಪ್ರೋತ್ಸಾಹಿಸಲು ಯೋಜನೆಯನ್ನು ತಯಾರಿಸುವುದು<br>ಯೋಜನೆಯಲ್ಲಿ ವ್ಯಾಪಾರ ವಲಯಗಳ, ವ್ಯಾಪಾರ ನಿಷೇಧವಿರುವ ವಲಯಗಳ ವಿವರಗಳು, ಮುಂತಾದ ವಿವರಗಳನ್ನು ಸೂಚಿಸುವುದು | **ಸ್ಥಳೀಯ ಪ್ರಾಧಿಕಾರವು ಯೋಜನಾ ಪ್ರಾಧಿಕಾರ ಮತ್ತು ಪಟ್ಟಣ ವ್ಯಾಪಾರ ಸಮಿತಿಯೊಡನೆ ತಯಾರಿಸಬೇಕು** | 21. **ಬೀದಿ ವ್ಯಾಪಾರದ ಯೋಜನೆ:**<br>(1) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ ಪ್ರತಿ ಐದು ವರ್ಷಗಳಿಗೊಮ್ಮೆ ಯೋಜನಾ ಪ್ರಾಧಿಕಾರದೊಡನೆ ಸಮಾಲೋಚನೆ ಮತ್ತು ಪಟ್ಟಣ ವ್ಯಾಪಾರ ಸಮಿತಿಯ ಶಿಫಾರಸ್ಸಿನ ಮೇಲೆ ಒಂದನೇ ಪರಿಶಿಷ್ಟದಲ್ಲಿ ಒಳಗೊಂಡಿರುವ ವಿಷಯಗಳನ್ನು ಒಳಗೂಡಿಸಿಕೊಂಡಂತೆ ಬೀದಿ ವ್ಯಾಪಾರ ವೃತ್ತಿಯನ್ನು ಪ್ರೋತ್ಸಾಹಿಸಲು ಒಂದು ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. |

# ಕಾನೂನನ್ನು ಜಾರಿಗೆ ತರಲು ಕೈಗೊಳ್ಳಬೇಕಾದ ಕ್ರಮಗಳು

| ಕೈಗೊಳ್ಳಬೇಕಾದ ಕ್ರಮಗಳು | ಜವಾಬ್ದಾರಸ್ಥರು | ಸಂಬಂಧಪಟ್ಟ ಕಾನೂನಿನ ಅಂಶಗಳು |
|---|---|---|
| 6. ಸಮೀಕ್ಷೆಯಾದ ನಂತರ ವ್ಯಾಪಾರ ಪ್ರಮಾಣ ಪತ್ರವನ್ನು ಸಮೀಕ್ಷೆಯಲ್ಲಿ ಪಾಲ್ಗೊಂಡ ಎಲ್ಲಾ ವ್ಯಾಪಾರಿಗಳಿಗೆ ಹಂಚಿಕೆ ಮಾಡುವುದು | **ಪಟ್ಟಣ ವ್ಯಾಪಾರ ಸಮಿತಿ** | 4. **ವ್ಯಾಪಾರದ ಪ್ರಮಾಣ ಪತ್ರಿಕೆ ನೀಡಿಕೆ**<br>(1) ಃನೇ ಪ್ರಕರಣದ (1) ಉಪಪ್ರಕರಣದ ಮೇರೆಗೆ ನಡೆಸಿದ ಸಮೀಕ್ಷೆಯಲ್ಲಿ ಹದಿನಾಲ್ಕು ವರ್ಷ ಅಥವಾ ಯಥೋಚಿತ ಸರ್ಕಾರವು ನಿಯಮಿಸಬಹುದಾದಂತಹ ವಯಸ್ಸನ್ನು ಪೂರ್ಣಗೊಳಿಸಿದ ಪ್ರತಿಯೊಬ್ಬ ಬೀದಿ ವ್ಯಾಪಾರಿಗೂ, ಪಟ್ಟಣ ವ್ಯಾಪಾರ ಸಮಿತಿಯು, ಬೀದಿ ವ್ಯಾಪಾರದ ಯೋಜನೆಯಲ್ಲಿ ಮಾರಾಟದ ಪ್ರಮಾಣ ಪತ್ರಿಕೆ ನೀಡಿಕೆ ಸಂಬಂಧ ನಿರ್ದಿಷ್ಟಪಡಿಸಿದ ನಿರ್ಬಂಧಗಳು ಒಳಗೊಂಡಂತೆ ಹಾಗೂ ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟಂತೆ ಮತ್ತು ಕಾರ್ಯಯೋಜನೆಯಲ್ಲಿ ನಿರ್ದಿಷ್ಟ ಪಡಿಸಿದ ಕಾಲಾವಧಿಯೊಳಗೆ ವ್ಯಾಪಾರದ ಪ್ರಮಾಣಪತ್ರಿಕೆಯನ್ನು ನೀಡತಕ್ಕದ್ದು. ಪರಂತು, ಃನೇ ಪ್ರಕರಣದ (1) ನೇ ಉಪಪ್ರಕರಣದಡಿಯ ಸಮೀಕ್ಷೆಯಲ್ಲಿ ಒಬ್ಬ ವ್ಯಕ್ತಿಯು ಸೇರಿರಲಿ ಅಥವಾ ಸೇರದಿರಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅವನಿಗೆ ಪರವಾನಗಿ ಎಂದಾಗಲಿ ಅಥವಾ ಇತರ ಯಾವುದೇ ರೂಪದ ಅನುಮತಿ ಎಂದಾಗಲಿ (ಸ್ಥಿರ ವ್ಯಾಪಾರಿ ಅಥವಾ ಸಂಚಾರಿ ವ್ಯಾಪಾರಿ ಅಥವಾ ಯಾವುದೇ ಇತರ ವರ್ಗದಡಿಯಲ್ಲಿ) ವ್ಯಾಪಾರದ ಪ್ರಮಾಣ ಪತ್ರಿಕೆಯನ್ನು ನೀಡಿದ್ದಲ್ಲಿ ಅಂತಹ ವ್ಯಕ್ತಿಯನ್ನು ವ್ಯಾಪಾರದ ಪ್ರಮಾಣ ಪತ್ರಿಕೆಯನ್ನು ಯಾವ ಅವಧಿಯವರೆಗೆ ಯಾವ ವರ್ಗಕ್ಕೆ ನೀಡಲಾಗಿದೆಯೋ ಆ ವರ್ಗಕ್ಕೆ ಬೀದಿ ವ್ಯಾಪಾರಿಯೆಂದು ಪರಿಗಣಿಸತಕ್ಕದ್ದು. |
| 7. ಬೈಲಾಗಳನ್ನು ರಚಿಸುವುದು<br><br>ಬೈಲಾಗಳಲ್ಲಿ ವ್ಯಾಪಾರದ ನಿಯಂತ್ರಣ ಹಾಗು ವ್ಯಾಪಾರದ ವಲಯಗಳಲ್ಲಿ ವಾಹನ ಸಂಚಾರದ ನಿಯಂತ್ರಣ, ಮುಂತಾದವನ್ನು ಸೂಚಿಸಲಾಗುವುದು | **ಸ್ಥಳೀಯ ಪ್ರಾಧಿಕಾರ** | 37. **ಬೈಲಾಗಳನ್ನು ಮಾಡುವ ಅಧಿಕಾರ:**<br>ಈ ಅಧಿನಿಯಮದ ಉಪಬಂಧಗಳು ಅಥವಾ ಇದರ ಮೇರೆಗೆ ಮಾಡಲಾದ ಯಾವುದೇ ನಿಯಮ ಅಥವಾ ಕಾರ್ಯಯೋಜನೆಗೆ ಒಳಪಟ್ಟಂತೆ ಸ್ಥಳೀಯ ಪ್ರಾಧಿಕಾರವು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳ ಕುರಿತಂತೆ ಬೈಲಾಗಳನ್ನು ಮಾಡಬಹುದು [...] |


ಬೀದಿ ವ್ಯಾಪಾರ:
ಪಕ್ಕ ಲೀಗಲ್!